ಚಾಸಾ – 1

ಪ್ರಾಸಾ – 1

ದಿ ಃ **19.01.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರೆದ ಮುಖ್ಯ ವಿಚಾರಣೆ ಃ ಮಾನ್ಯ ಅಭಿಯೋಜಕರಿಂದ**

ದಿನಾಂಕಃ 17.12.2008 ರ ಸ್ಥಳ ಮಹಜರನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರ್ತಿಸಲಾಯಿತು. ಈ ಬಗ್ಗೆ ನಾನು ದಿಃ 16.12.2008 ರಂದು ಹೇಳಿಕೆ ಕೊಟ್ಟಿರುತ್ತೇನೆ.

ಸಾಕ್ಷಿಯು ಒಂದು ಮರದ ತುಂಡನ್ನು ನೋಡಿ ಗುರ್ತಿಸಿದ್ದು ಅದನ್ನು ಮು.ಮಾ 1 ಎಂದು, ಒಂದು ಮಾಂಸದ ಖತ್ತಿಯನ್ನು ಮು.ಮಾ 2 ಎಂದು, ಒಂದು ಸಣ್ಣ ಚಾಕುವನ್ನು ಮು.ಮಾ 3 ಎಂದು, ಎರಡು ಕೆಂಪು ಬ್ಯಾಟರಿಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಮು.ಮಾ 4 ಮತ್ತು 5 ಎಂದು, 2 ಕೆಜಿ ಯ ತೂಕದ ಬಟ್ಟನ್ನು ಮು.ಮಾ 6 ಎಂದು, 1 ಕೆಜಿ ಯ ತೂಕದ ಬಟ್ಟನ್ನು ಮು.ಮಾ 7 ಎಂದು, ಅರ್ಧ ಕೆಜಿ ಯ ತೂಕದ ಬಟ್ಟನ್ನು ಮು.ಮಾ 8 ಎಂದು, ಒಂದು ಕಳಚಿರುವ ತಕ್ಕಡಿಯನ್ನು ಒಟ್ಟಾಗಿ ಅಂದರೆ ಎರಡು ಕೊಂಡಿ, ಎರಡು ತಕ್ಕಡಿಯ ಬಟ್ಟಲು, ಒಂದು ಸ್ಕೇಲ್, ಆರು ಚೈನ್ ಗಳನ್ನು ಮು.ಮಾ 9 ಎಂದು, ಪ್ಲಾಸ್ಟಿಕ್ ಚೀಲವನ್ನು ಮು.ಮಾ 10 ಎಂದು ಗುರ್ತಿಸಲಾಯಿತು. ಅಮಾನತ್ತು ಪಡಿಸಿಕೊಂಡ ಕಾರಿನ ಫೋಟೋವನ್ನು ಮತ್ತು ಸಿಡಿಯನ್ನು ಹಾಜರು ಮಾಡಿದ್ದು, ಸರ್ಟಿಫಿಕೇಟನ್ನು ಹಾಜರು ಮಾಡಿರುತ್ತಾರೆ. ಸದರಿ ಫೋಟೋವನ್ನು ನಿಪಿ 4 ಎಂದು, ಸಿಡಿಯನ್ನು ನಿಪಿ 5 ಎಂದು, ಸರ್ಟಿಫಿಕೇಟನ್ನು ನಿಪಿ 5(ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು ಃ ದೋಷಾರೋಪಣೆ ರಚಿಸಿದ ನಂತರ ಪಾಟೀ ಸವಾಲು ಮಾಡುವುದಾಗಿ ವಕೀಲರು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ